

## ಭೌಗೋಳಿಕ ಇತಿಹಾಸ

ಪೊಂಪೈ ಪಟ್ಟಣವು ಇದ್ದ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು 40 ಮೀಟರ್ ಎತ್ತರದಲ್ಲಿರುವ ಕರಾವಳಿಯ ಲಾವಾ ಪ್ರಸ್ಥಭೂಮಿಯಲ್ಲಿ ನಿರ್ಮಾಣಗೊಂಡಿದೆ.

ಈ ಪಟ್ಟಣದಿಂದ 8 ಕಿ.ಮೀ ದೂರದ ಮೌಂಟ್ ವಸಾವಿಯನ್ ಜ್ವಾಲಾಮುಖಿ ಸ್ಫೋಟಗೊಂಡು ಅಲ್ಲಿನ ಸಮುದ್ರದ ದಕ್ಷಿಣ ಮತ್ತು ಪಶ್ಚಿಮಕ್ಕೆ ಹರಿದ ಲಾವಾ ಕರಗಿ ಕಲ್ಲಾಯಿತು. ಆ ಕಲ್ಲಿನ ಮೇಲೆ ವಸಾವಿಯನ್ ಪರ್ವತದಲ್ಲಾದ ಭೂ ಕುಸಿತದ ಮಣ್ಣು ಹರಡಿತು ಮತ್ತು ಮಳೆಯಿಂದಾಗಿ ಮಣ್ಣು ಕೊಚ್ಚಿಹೋಗಿ ಅದರ ಮೇಲೆ ನಾಗರಿಕತೆ ಬೆಳೆಯಿತೆಂದು ಹೇಳಲಾಗುತ್ತದೆ. ಜ್ವಾಲಾಮುಖಿಯಿಂದಲೇ ನಿರ್ಮಾಣಗೊಂಡ ಪೊಂಪೈ ಪಟ್ಟಣವು ಅದೇ ಜ್ವಾಲಾಮುಖಿಯ ಸ್ಫೋಟದಿಂದ ನಿರ್ನಾಮಗೊಂಡಿತು.

ಲ್ಯಾಟಿನ್ ಭಾಷೆಯಲ್ಲಿ 'ಪೊಂಪೈ' ಎಂದರೆ 'ಅವನತಿ' ಎಂದರ್ಥ. ಪೊಂಪೈ ಪಟ್ಟಣವು ಒಟ್ಟು 170 ಎಕರೆ ವಿಸ್ತೀರ್ಣದ ಭೂಪ್ರದೇಶದಿಂದ ಕೂಡಿದೆ. ಈ ಪ್ರದೇಶದಲ್ಲಿ ನಡೆಸಿದ ಉತ್ಖನನದ ವೇಳೆ 1,500ಕ್ಕೂ ಹೆಚ್ಚು ದೇಹಗಳು ಸಿಕ್ಕಿದ್ದರೂ ಸಾವಿನ ಸಂಖ್ಯೆ ಖಚಿತವಾಗಿ ತಿಳಿದುಬಂದಿಲ್ಲ.

## ಇತಿಹಾಸದ ಉತ್ಖನನ

1748ರಲ್ಲಿ 3ನೇ ಚಾರ್ಲ್ಸ್ ಬೌರ್ಬೋನ್‌ನ ನೇತೃತ್ವದಲ್ಲಿ ಬಿಸಿಯಾದ ಬೂದಿಯಡಿಯಲ್ಲಿ ಹೂತುಹೋಗಿದ್ದ ಪೊಂಪೈ ಪಟ್ಟಣದ ಉತ್ಖನನವನ್ನು ಅಲ್ಲಿನ ವಿಜ್ಞಾನಿಗಳು ನಡೆಸಿದಾಗ, ಅಲ್ಲಿ ಸಂಭವಿಸಿದ ದುರಂತದ ಕುರಿತಾದ ಅನೇಕ ವಿಚಾರಗಳು ಹೊರಜಗತ್ತಿಗೆ ತಿಳಿದವು. ಸಂಶೋಧನೆಗಳ ಪ್ರಕಾರ ಜ್ವಾಲಾಮುಖಿ ಸ್ಫೋಟಿಸಿ ಅದರ ಲಾವಾ ಪಟ್ಟಣಕ್ಕೆ ಹರಿದು ಬಂದಾಗ ಪೊಂಪೈನಲ್ಲಿದ್ದ ಯಾರೊಬ್ಬರೂ, ಯಾವ ಪ್ರಾಣಿ ಪಕ್ಷಿಗಳೂ ಬದುಕುಳಿಯಲಿಲ್ಲ.

ಪೊಂಪೈ ಪಟ್ಟಣವು ಸುಮಾರು 170 ಎಕರೆ ವಿಸ್ತೀರ್ಣದಲ್ಲಿದ್ದು, ಅಲ್ಲಿರುವ ಅವಶೇಷಗಳ ಆಧಾರದ ಮೇಲೆ, ನಗರದಲ್ಲಿ ಸುಮಾರು 11 ಸಾವಿರದಿಂದ 15 ಸಾವಿರ ಜನಸಂಖ್ಯೆಯಿತ್ತೆಂದು ಊಹಿಸಲಾಗಿದೆ. ಅಲ್ಲಿನ ಪುರಾತತ್ವ ಇಲಾಖೆಯು ಈ ಪಟ್ಟಣವಿದ್ದ ಸ್ಥಳದಲ್ಲಿ ಉತ್ಖನನ ನಡೆಸುವ ಸಂದರ್ಭದಲ್ಲಿ ಕುದುರೆಯ ದೇಹ ಮತ್ತದರ ರಕ್ಷಾಕವಚ ಹಾಗೂ ಮನುಷ್ಯನ ಮೆದುಳನ್ನು ಗುರುತಿಸಿದ್ದು, ಅವೆಲ್ಲವೂ ಸಂಪೂರ್ಣವಾಗಿ ಕಲ್ಲಾಗಿವೆ.

## ಯುನೆಸ್ಕೋ ಸಂರಕ್ಷಿತ ಪ್ರದೇಶ

ಪೊಂಪೈ ಮಾತ್ರವಲ್ಲದೇ ಹಕ್ಯುಲೇನಿಯಮ್ ಎಂಬ ಸಣ್ಣ ಪಟ್ಟಣವೂ ಆ ಜ್ವಾಲಾಮುಖಿಯ ಪ್ರತಾಪಕ್ಕೆ ನಾಶವಾಯಿತು. ಜ್ವಾಲಾಮುಖಿ ಸ್ಫೋಟಗೊಂಡು ಅದರ ಲಾವಾರಸ ಹರಿದಾಗ, ಅಲ್ಲಿನ ಸುಮಾರು 300 ಜನರು ತಮ್ಮ ಪ್ರಾಣ ಉಳಿಸಿಕೊಳ್ಳಲು ಅಲ್ಲೇ ಇದ್ದ ಬೋಟ್ ಹೌಸ್‌ಗಳಿಗೆ ಓಡಿಹೋದರು. ಆದರೆ ಲಾವಾದ ಭೀಕರ ಶಾಖದಿಂದಾಗಿ ಅವರೂ ಬೋಟ್‌ನೊಳಗೇ ದುರಂತ ಸಾವೀಗೀಡಾದರೆಂದು ಹೇಳಲಾಗಿದೆ. ಅಂದಿನ ಕಾಲದಲ್ಲಿ ಲಾವಾದೊಳಗೆ ಜೀವಂತ ಸಮಾಧಿಯಾಗಿದ್ದವರ ಕಲ್ಲಿನ ಶವಗಳನ್ನು 1980ರಲ್ಲಿ ಹೊರತೆಗೆಯಲಾಯಿತು.

ಪೊಂಪೈ–ಹಕ್ಯುಲೇನಿಯಮ್ ಅವಳಿ ಪಟ್ಟಣಗಳನ್ನು 1990ರಲ್ಲಿ 'ಯುನೆಸ್ಕೋ ವಿಶ್ವ ಪಾರಂಪರಿಕ ಸ್ಥಳ'ಗಳ ಪಟ್ಟಿಯಲ್ಲಿ ಸೇರಿಸಲಾಗಿದ್ದು, ಪ್ರತೀ ವರ್ಷ ಇಲ್ಲಿಗೆ ಸುಮಾರು 25 ಲಕ್ಷ ಪ್ರವಾಸಿಗರು ಆಗಮಿಸುತ್ತಾರೆ.

ಉತ್ಖನನದಿಂದ ಪೊಂಪೈ ಪಟ್ಟಣದ ನಿವಾಸಿಗಳ ದೈನಂದಿನ ಜೀವನದ ಬಗ್ಗೆ ತಕ್ಕಮಟ್ಟಿನ ಒಳನೋಟ ದೊರೆತರೂ ಹೆಚ್ಚಿನ ಪುರಾವೆಗಳು ಲಾವಾದ ಬಿಸಿಯಲ್ಲಿ ಕಲ್ಲಾಗಿವೆ. ಪ್ರಾರಂಭಿಕ ಉತ್ಖನನಗಳ ಪ್ರಕಾರ ಇದು ಶ್ರೀಮಂತ ಪಟ್ಟಣವಾಗಿತ್ತೆಂಬುದಕ್ಕೆ ಹಲವು ಪುರಾವೆಗಳು ದೊರಕಿವೆ. ಇಲ್ಲಿ ಕಲ್ಲಾಗಿರುವ ಅನೇಕ ಕಟ್ಟಡಗಳು, ಐಷಾರಾಮಿ ಖಾಸಗಿ ಮನೆಗಳು, ಅದ್ದೂರಿ ಅಲಂಕಾರಗಳು, ಪೀಠೋಪಕರಣಗಳು, ಪಾದಚಾರಿಗಳ ಎತ್ತರದ ಕಾಲುದಾರಿಗಳು, ಮೆಟ್ಟಿಲುಗಳು, ವಿಶ್ರಾಂತಿ ಗೃಹಗಳು, ಖಾಸಗಿ ಮನೆಗಳು, ಸಾರ್ವಜನಿಕ ಸ್ನಾನಗೃಹಗಳು, ಗ್ಲಾಡಿಯೇಟರ್‌ಗಳು, ಆಂಫಿಥಿಯೇಟರ್, ನಾಟಕ ಮಂದಿರ ಮತ್ತು ಕಲಾಕೃತಿಗಳು ಗತವೈಭವ ಸಾರುವಂತಿವೆ.

ಕಲ್ಲಾಗಿರುವ ಲಾವಾದ ನಡುವೆ ಸಿಲುಕಿಕೊಂಡಿದ್ದ ದೇಹ ಮತ್ತಿತರ ವಸ್ತುಗಳು ಕೊಳೆತು ಕಲ್ಲಿನ ನಡುವಿನ ಖಾಲಿ ಜಾಗಗಳಿಂದ ಅಲ್ಲಿ ಯಾವ ಪ್ರಾಣಿ ಅಥವಾ ವಸ್ತುಗಳು ಸಿಲುಕಿಕೊಂಡಿದ್ದವೆಂದು ಪುರಾತತ್ವಜ್ಞರು ಕಂಡುಕೊಂಡಿದ್ದಾರೆ. ಆ ಕ್ಷಣದಲ್ಲಿ ಅಲ್ಲಿನ ಜನರ ಜೀವನದ ಅಂತಿಮ ಕ್ಷಣಗಳ ಭೀಕರತೆಯನ್ನು ಸಾರುವಂತಹ ಮಾದರಿಗಳನ್ನು (ಪ್ಲ್ಯಾಸ್ಟರ್ ಕ್ಯಾಸ್ಟ್) ತಯಾರಿಸಲು ಅಲ್ಲಿ ದೊರೆತಿರುವ ಕಲ್ಲಿನ ಪ್ರತಿಕೃತಿಗಳನ್ನು ಅಚ್ಚುಗಳಾಗಿ ಬಳಸಬಹುದಾದ ರೀತಿಯಲ್ಲಿ ಅವಶೇಷಗಳಿವೆ.

ನಿರಂತರ ಉತ್ಖನನದ ಕಾರಣದಿಂದ ಲಾವಾ ಮತ್ತು ಬೂದಿಯಲ್ಲಿ ಸುರಕ್ಷಿತವಾಗಿದ್ದ ಅನೇಕ ದೇಹಗಳು ಕೊಳೆಯಲಾರಂಭಿಸಿದ್ದರಿಂದ, 1960ರ ನಂತರ ಉತ್ಖನನಕ್ಕೆ ನಿರ್ಬಂಧ ಹಾಕಿ, ಆದ್ಯತೆಯ ಪ್ರದೇಶಗಳಿಗೆ ಸಂಶೋಧನೆಗಳನ್ನು ಸೀಮಿತಗೊಳಿಸಲಾಯಿತು.

'ಮಣ್ಣಿನಿಂದ ಹುಟ್ಟಿ ಮಣ್ಣಾಗಿ ಹೋಗುವ ಈ ಶರೀರ..' ಎಂಬ ಮಾತನ್ನು ಸಾಕ್ಷಾತ್ಕರಿಸುವಂತೆ ತೋರುವ ಪೊಂಪೈ ಕಲ್ಲಿನ ಪಟ್ಟಣ, ಸಿಟ್ಟಿಗೆದ್ದ ಪ್ರಕೃತಿಯ ಎದುರು ಮನುಷ್ಯನ ಹಾರಾಟಗಳು ಎಷ್ಟು ಕ್ಷುಲ್ಲಕ ಎಂಬುದನ್ನೂ ಸಾರುವಂತಿದೆ.

ಪ್ರತಿಕ್ರಿಯಿಸಿ: feedback@sudha.co.in

